<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕಾರವಾರ**</u>

**ಅಸಲು ದಾವೆ ನಂ. 9/2015**

ಪಿ.ಡಬ್ಲ್ಯು 4

| | | |
|---|---|---|
| ಸಾಕ್ಷಿದಾರರ ಹೆಸರು | - | ನಿಶ್ಚಲ್ ನರೋನ್ಹಾ |
| ತಂದೆಯ ಹೆಸರು | - | ಫ್ರಾನ್ಸಿಸ್ ನರೋನ್ಹಾ |
| ವಯಸ್ಸು | - | 49 ವರ್ಷ |
| ಉದ್ಯೋಗ | - | ತಹಶೀಲ್ದಾರ, ಕಾರವಾರ |
| ವಾಸ್ತವ್ಯ | - | ಕಾರವಾರ |

(ಇಂದು ದಿನಾಂಕ 30-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

<u>**ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಎಸ್.ಕೆ.ಪಿ. ವಕೀಲರಿಂದ**</u>

ನಾನು 01-07-2023 ರಿಂದ ಇಲ್ಲಿಯವರೆಗೆ ಕಾರವಾರದಲ್ಲಿ ತಹಶೀಲ್ದಾರ ಆಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ. ದಿನಾಂಕ 09-09-2025 ರಂದು ನ್ಯಾಯಾಲಯದಿಂದ ದಾಖಲಾತಿಗಳನ್ನು ಹಾಜರುಪಡಿಸಲು ಸಮನ್ಸ್ ಬಂದಿತ್ತು. ನಮ್ಮ ಕಚೇರಿಯಲ್ಲಿ ಲಭ್ಯ ಇರುವ ಮಧ್ಯಂತರ ಅರ್ಜಿಯಲ್ಲಿ ಕೇಳಿರುವ ದಾಖಲಾತಿಗಳ ಜೆರಾಕ್ಸ ಪ್ರತಿಗಳನ್ನು ಆ ದಿನ ಹಾಜರುಪಡಿಸಿ ಈ ದಿನ ಪಹಣಿಗಳನ್ನು ಮತ್ತು ಇತರ ದಾಖಲಾತಿಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದೇನೆ.

ಸ.ನಂ. 231 ಅ/1 ಅ 1 ರ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 14 ಎಂದು ಗುರುತಿಸಲಾಯಿತು. ಭೂಮಾಪನ ಇಲಾಖೆಯ ನಕ್ಷೆಯ ಟ್ರು ಕಾಪಿ ಹಾಜರುಪಡಿಸಿದ್ದು ಅದನ್ನು ನಿ.ಪಿ.15 ಎಂದು ಗುರುತಿಸಲಾಯಿತು. ಸ.ನಂ. 231 ಅ/1 ಅ 1 ಡ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 16 ಎಂದು ಗುರುತಿಸಲಾಯಿತು. ಸ.ನಂ. 231 ಅ/1 ಅ 1 ಕ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 17 ಎಂದು ಗುರುತಿಸಲಾಯಿತು. ಸ.ನಂ. 231 ಅ/1 ಅ 1 ಬ 2 ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 18 ಎಂದು ಗುರುತಿಸಲಾಯಿತು. ಸ.ನಂ.



231 ಅ/1 ಅ 1 ಬ 1 ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 19 ಎಂದು ಗುರುತಿಸಲಾಯಿತು. ಸ.ನಂ. 231 ಅ/1 ಅ 1 ಅ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 20 ಎಂದು ಗುರುತಿಸಲಾಯಿತು. 11 'ಬಿ' ದಪ್ತರ್

ಪ್ರತಿ ಪೋಡಿಯ ಟ್ರು ಕಾಪಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ. 21 ರಿಂದ ನಿ.ಪಿ. 31 ಎಂದು ಗುರುತಿಸಲಾಯಿತು. ಆಕಾರ ಬಂದ್‌ನ ಟ್ರು ಕಾಪಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 32 ಎಂದು ಗುರುತಿಸಲಾಯಿತು. 7 ಕಮ್ಮಿ ಜಾಸ್ತಿ ಪತ್ರಿಕೆಯ ಟ್ರು ಕಾಪಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ. 33 ರಿಂದ ನಿ.ಪಿ. 39 ಎಂದು ಗುರುತಿಸಲಾಯಿತು. 4 ಹಕ್ಕು ಬದಲಾವಣೆಯ ಟ್ರು ಕಾಪಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ. 40 ರಿಂದ ನಿ.ಪಿ. 43 ಎಂದು ಗುರುತಿಸಲಾಯಿತು. ಫಾರ್ಮ ನಂ. 7 ರ ಟ್ರು ಕಾಪಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 44 ಎಂದು ಗುರುತಿಸಲಾಯಿತು. ಭೂನ್ಯಾಯ ಮಂಡಳಿಯಲ್ಲಿ ನಡೆದಂತಹ ಕೇಸಿನ ಆದೇಶ ಪುಟದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 45 ಎಂದು ಗುರುತಿಸಲಾಯಿತು. ಭೂನ್ಯಾಯ ಮಂಡಳಿಯ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 46 ಎಂದು ಗುರುತಿಸಲಾಯಿತು. ಫಾರ್ಮ ನಂ. 10 ರ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 47 ಎಂದು ಗುರುತಿಸಲಾಯಿತು. ನಿ.ಪಿ.6 ಮತ್ತು ನಿ.ಪಿ. 7 ನ್ನು ನಮ್ಮ ಕಚೇರಿಯಿಂದ ಕೊಡಲಾಗಿದೆ. ಫಾರ್ಮ ನಂ. 11 ಬಂದ ನಂತರ ಹಕ್ಕು ಬದಲಾವಣೆ ಆಗುತ್ತವೆ. ಈ ಪ್ರಕರಣದಲ್ಲಿ ಯಾವುದೇ ಪೋಡಿ ಆಗಿಲ್ಲ. ದಾಖಲಾತಿಗಳ ಪ್ರಕಾರ ಫಾರ್ಮ ನಂ. 11 ಮತ್ತು ಫಾರ್ಮ ನಂ. 12 ಇರುವುದಿಲ್ಲ. ಭೂನ್ಯಾಯಮಂಡಳಿಯಲ್ಲಿ ನಿರ್ವಹಿಸಿರುವ ದಾಖಲಾತಿಗಳಿಗೂ ಹಾಗೂ ನಮ್ಮ ಕಚೇರಿಯಲ್ಲಿರುವ ಕಂದಾಯ ದಾಖಲಾತಿಗಳಿಗೂ ಹೊಂದಾಣಿಕೆ ಆಗುವುದಿಲ್ಲ.

O.S. 9/15
P.W.4

**ಪಾಟೀ ಸವಾಲುಃ ಪ್ರತಿವಾದಿ ನಂ. 1 ರಿಂದ 4, 9, 11(ಎ)11(ಬಿ) ಮತ್ತು 13 ರ ವರ ಪರ ಶ್ರೀ ಎಸ್.ವಾಯ್. ಎಸ್. ವಕೀಲರಿಂದಃ**

ನಮ್ಮ ಕಚೇರಿಯಲ್ಲಿ ಲಭ್ಯವಿರುವ ವಾದಿಯರು ಕೇಳಿದಂತಹ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿ.ಪಿ. 14 ರಿಂದ 47 ರ ದಾಖಲಾತಿಗಳನ್ನು ವೈಯಕ್ತಿಕವಾಗಿ ನಾನು ತಯಾರಿಸಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ